ಪೂರೈಸುವ ಅವಳ ವಿಧೇಯತೆ ನನಗೆ ಇಷ್ಟವಾಗತೊಡಗಿತ್ತು. ಅವಳು ಸದಾ ನಗುನಗುತ್ತಾ ಇರುವುದು, ಯಾವುದೇ ವಿಷಯನ್ನೂ ಪಾಸಿಟಿವ್ ಸೈಡಿನಿಂದ ನೋಡುವುದು, ಎಲ್ಲರನ್ನೂ ಆದರಿಸುವುದು ಇವೆಲ್ಲ ಗುಣಗಳು ಬಹಳೇ ಇಷ್ಟವಾಗತೊಡಗಿದ್ದವು. ಅವಳಲ್ಲಿ ಒಬ್ಬ ಆತ್ಮೀಯ ಗೆಳತಿಯನ್ನು ಕಂಡಮೇಲೆ ನಾನು ಮೊದಲಿನಂತೆ ಅವಳನ್ನು ಹೀಗಳೆಯುವುದನ್ನು ನಿಲ್ಲಿಸಿದ್ದೆ. ವಾರಿಜ ನನಗೆ ಗೆಳತಿಯಾದದ್ದು ಹೀಗೆ. ನನ್ನೊಳಗೆ ಕವಿಯನ್ನ ಮೂಡಿಸಿದ ಚಂದ್ರಾಳ ಕುರಿತ ಅದೆಷ್ಟು ಕವಿತೆ ಬರೆದೆನೋ... ಚೆಲುವಿನ ಬಗೆ ಬರೆದರೆ ಚಂದ್ರಾಳೇ ಒಳಗಣ್ಣಿನಲ್ಲಿ ನಿಲ್ಲುತ್ತಿದ್ದ ದಿನಗಳು ಮಾಸಿ, ಚೆಲುವೆಂಬುವುದು ಒಂದು ಸ್ಥಿತಿಯಷ್ಟೇ ಅಲ್ಲ, ಅದೊಂದು ಅನುಭೂತಿ ಕೂಡಾ ಎಂಬ ಭಾವ ಮೂಡಿಸಿದವಳು ಇದೇ ವಾರಿಜ.

ಕಾಲೇಜು ನನ್ನನ್ನು ಮೆಲ್ಲಮೆಲ್ಲನೆ ಬದಲಿಸತೊಡಗಿತ್ತು ಅಥವಾ ಹೀಗಂದರೂ ಆಗಬಹುದು, ಚಂದ್ರಾ, ಮನೆ, ಅಪ್ಪ, ಅಮ್ಮ, ಊರು, ಕೆರೆ ಬಾವಿಗಳನ್ನ ದಾಟಿ ಜಗತ್ತನ್ನೇ ನೋಡದ ಮನಸಿಗೆ ಪ್ರಪಂಚ ಬಹಳಷ್ಟು ದೊಡ್ಡದಿದೆ ಅನಿಸಿ... ನಾನು ಊರು ಮರೆಯತೊಡಗಿದ್ದೆ. ಕಾಲೇಜಿನ ದಿನಗಳಲ್ಲಿ ಓದಿದೆನೋ ಇಲ್ಲವೋ ಗೆಳೆಯರೊಂದಿಗೆ ದಂಡು ಕಟ್ಟಿ ಊರು ಕೇರಿ ಸುತ್ತಿದೆ, ಬಹಳಷ್ಟು ಓದಿದೆ, ಓಡಾಡಿದೆ, ಕತೆ, ಕವಿತೆ ಬರೆದೆ, ಸ್ಟೂಡೆಂಟ್ ಯೂನಿಯನ್‌ನ ಲೀಡರ್ರಾದೆ. ಭಾಷಣಕ್ಕೆ ನಿಂತೆ. ಹುಡುಗರು ತಮ್ಮ ಸಮಸ್ಯೆ ಹೇಳಿಕೊಂಡು ಬರುತ್ತಿದ್ದರೆ ತಾನು ಅದು ನನ್ನದೇ ಸಮಸ್ಯೆಯೇನೋ ಎಂಬಷ್ಟು ಭಾವುಕನಾಗಿ ಅದನ್ನು ಎದೆಯ ಮೇಲಿಟ್ಟುಕೊಂಡು ಹೋರಾಡುತ್ತಿದ್ದೆ. ನನ್ನ ಪ್ರಯತ್ನವೆಲ್ಲವೂ ನನ್ನ ನೂರು ಪರ್ಸೆಂಟ್ ಶ್ರಮ ಕಂಡಿರುತ್ತಿದ್ದ ಪರಿಣಾಮ ಬಹುತೇಕ ಎಲ್ಲವೂ ಯಶಸ್ವಿಯೇ ಆಗುತ್ತಿದ್ದವು. ನನ್ನ ಅಹಂ ಬಲಿಯಿತು. ನಾನೂ ಬಲಿತೆ . ಕಾಲೇಜಿನಲ್ಲಿ ಕಲಿಸದ ನೂರು ಸಾವಿರ ವಿಷಯಗಳನ್ನ ಬದುಕು ಕಲಿಸುತ್ತದೆ, ಜಗತ್ತು ತಿಳಿಸುತ್ತದೆ ಅಂತ ನಂಬಿದೆ, ಭಾವುಕನಾದೆ, ಚಂಚಲನಾದೆ, ಹೋರಾಟಗಾರನಾದೆ, ಅಲೆಮಾರಿಯಾದೆ. ಅಮ್ಮ ಇದೆಲ್ಲ ತಿಳಿಯದೆ, ಮಗ ಮಹತ್ತರ ಸಾಧನೆಯಲ್ಲಿ ತೊಡಗಿದ್ದಾನೆಂದು ಖುಷಿಯಾಗಿದ್ದಳು. ಅದರಲ್ಲೂ ನಮ್ಮೂರ ಹುಡುಗಿಯೊಬ್ಬಳು ಕಲೆಕ್ಟರ್ ಆದಮೇಲಂತೂ ಅಮ್ಮ ಹೊಟ್ಟೆಯುರಿಯಲಿ ಬೆಂದು ಮತ್ತೆ ನಾನು ಯಾವತ್ತು ರಜೆಯ ಮೇಲೆ ಬಂದರೂ ‘ಮಗನೇ ನೀನು ಆ ಡಿಸಿಯಲ್ಲ, ಅದರ ಅಪ್ಪನಂತ ಕೆಲಸಕ್ಕೆ ಹೋಗಬೇಕು, ಹೆಸರು ಮಾಡಬೇಕು, ಆ ಶಂಕರಯ್ಯನ ಮಗಳೇ ಅಂಥ ಕೆಲಸಕ್ಕೆ ಹೋಗ್ತಾಳೆಂದ ಮೇಲೆ ನೀನು ಇನ್ನೂ ದೊಡ್ಡ ಕೆಲಸಕ್ಕೆ ಹೋಗಬೇಕು’ ಅಂತೆಲ್ಲ ಹುರಿದುಂಬಿಸಿ ನನ್ನನ್ನು ಕೆಲಸಕ್ಕೆ ಹಚ್ಚಿದ ತೃಪ್ತಿಯಲ್ಲಿ ಹಗುರಾಗುತ್ತಿದ್ದಳು. ಅಂಥಾದ್ದರಲ್ಲಿ ನಾನೀಗ ಮನೆಗೆ ಬಂದು ಕುಳಿತಿರುವುದು ಅವಳಿಗೆ ನುಂಗಲಾರದ ತುತ್ತಾಗಿತ್ತು. ಅವಳದ್ದು ಒಂದೇ ವರಾತ ‘ನೀನು ಓದಿದ್ದೀಯ, ಪಟ್ಟಣದಲ್ಲಿ ಒಳ್ಳೆ ಕೆಲಸಕ್ಕೆ ಸೇರಬೇಕು, ಹಣಗಳಿಸಬೇಕು, ಹೆಸರು ಮಾಡಬೇಕು, ಈ ಹಾಳು ಆಸ್ತಿ ಮಾರಿ ನಾವೆಲ್ಲ ಪೇಟೆಯಲ್ಲಿ ಸೆಟಲ್ ಆಗಬೇಕು. ಯಾರಿಗೆ ಬೇಕು ಈ ಆರಕ್ಕೇರದ ಮೂರಕ್ಕಿಳಿಯದ ಬದುಕು?’

‘ಅಮ್ಮ ಹೇಳೋದು ಸರೀನೇ ರವೀ, ಇಡೀ ಊರಿನ ಕಣ್ಣು ನಿನ್ನ ಮೇಲೇ ಇತ್ತು. ದೊಡ್ಡಗೌಡರ ಮಗ ಪೇಟೆಯಲ್ಲಿ ಏನೋ ದೊಡ್ಡದಾಗಿ ಓದ್ತಾ ಇದ್ದಾನೆ. ಮುಂದೇನು ಮಾಡಬಹುದು ಅನ್ನೋ ಕುತೂಹಲ ಎಲ್ರಿಗೂ ಇತ್ತು ,ಈಗ ನೋಡಿದ್ರೆ ನೀನು ಇಲ್ಲಿ ಬಂದು ಊರೇ ಗತಿ ಅಂತ ಕೂತಿದ್ದೀಯ! ಇದೇ ಅಮ್ಮನ ಪುಕಾರು. ಅವರು ನಿನ್ ಬಗೆ ಏನೇನೋ ಆಸೆ ಇಟ್ಕೊಂಡಿದ್ರು ಅನ್ಸುತ್ತೆ. ಈಗ ಅವ್ರಿಗೆ ನಿರಾಶೆಯಾಗಿದೆ. ಅದನೇ ಅವ್ರು ಕೋಪದ ಮೂಲಕ ತೋರ್ಸ್ಕೋತ್ತಾ ಇದ್ದಾರೆ ಅಷ್ಟೇ’ ಅನ್ನುತ್ತಿದ್ದಳು ವಾರಿಜ. ಅವಳ ಮಾತುಗಳಲ್ಲಿ ನಿಜವಿತ್ತು ನಿಜವೇ... ಆದರೆ, ಯಶಸ್ಸಿನ ಉತ್ತುಂಗಕ್ಕೆ